

‘ಹುಚ್ಚುಖೋಡಿ ಮನಸ್ಸು ಹದಿನಾರರ ವಯಸ್ಸು’ ಎಂಬ ಹಾಡಿನ ಸಾಲು ವಯಸ್ಸಿಗೆ ಬಂದ ಮಕ್ಕಳ ಮನಸ್ಥಿತಿಯನ್ನು ನೆನಪಿಸುವಂತಿದೆ. ಈ ವಯಸ್ಸಿನಲ್ಲಿ ಪ್ರೀತಿ, ಪ್ರೇಮ ಪ್ರಣಯವೂ ಸಹಜವೇ. ಈ ಪ್ರಣಯದ ಆವೃತ್ತಿಯೊಳಗೆ ಲೈಂಗಿಕ ಅನ್ವೇಷಣೆ, ಲೈಂಗಿಕ ಕ್ರಿಯೆಯ ಬಗ್ಗೆ ಕುತೂಹಲ ಇದ್ದೇ ಇರುತ್ತದೆ. ಇದು ಮಕ್ಕಳ ಬೆಳವಣಿಗೆ ಪ್ರಕ್ರಿಯೆಯ ಸಂಕ್ರಮಣ ಕಾಲವೂ ಹೌದು. 16ರಿಂದ 18ರ ವಯಸ್ಸಿನ ಹುಡುಗ–ಹುಡುಗಿಯರು ಸಹಮತದ ಲೈಂಗಿಕ ಕ್ರಿಯೆ ನಡೆಸಿದರೆ ಅದನ್ನು ಅಪರಾಧವಾಗಿ ಪರಿಗಣಿಸಬಾರದು ಎಂದು ವಕೀಲೆ ಇಂದಿರಾ ಜೈಸಿಂಗ್ ಮಂಡಿಸಿರುವ ವಾದ ಈಗ ಮುನ್ನೆಲೆಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ತಜ್ಞರು, ಮನೋವೈದ್ಯರು, ಸ್ತ್ರೀರೋಗ ತಜ್ಞರು, ವಕೀಲರು ಹಾಗೂ ಹದಿಹರೆಯದ ಮಕ್ಕಳು ಮಂಡಿಸಿದ ಅಭಿಪ್ರಾಯಗಳು–ಮಕ್ಕಳು, ಪೋಷಕರು ಹಾಗೂ ಇಡೀ ಸಮಾಜ ಚಿಂತನೆ ನಡೆಸುವಂತಿದೆ. ಹದಿವಯಸ್ಸಿನ ತವಕ–ತಲ್ಲಣಗಳನ್ನೊಳಗೊಂಡ ಈ ವಿಶೇಷ ಬರಹಗಳು ಈ ಸಂಚಿಕೆಯ ‘ಸುಧಾ’ ವಿಶೇಷ.